ಅಂಗಳದಲ್ಲಿ ಬೀಳುತ್ತಾನೆ ಇಲ್ಲವೆ ಬೆಂಗಳೂರಿನ ಆ ಸಣ್ಣ ಕೋಣೆಯಲ್ಲಿ. ನಾನು ಸಾಯಬಾರದು ಇವನನ್ನು ಇಂಚಿಂಚೆ ಸಾಯಿಸಬೇಕು. ಸತಾಯಿಸಬೇಕು. ಕಪ್ಪಿಟ್ಟ ಮೋಡಗಳು ಆಷಾಡದ ಹುಂಡಗಾಳಿಯಲ್ಲಿ ಎತ್ತ ತೇಲಬೇಕೋ ತಿಳಿಯದಾಗಿ ನೆತ್ತಿಯ ಮೇಲೆ ಧೋ...ಂತ ಮಳೆ ಸುರಿಸುತ್ತಿದ್ದವು.

ಖಾಸಗಿಯಾದ ತನ್ನ ಸಂಗತಿ ಕಲಾಪ್ರಪಂಚವನ್ನು ಅರಿಯದ ಶಾಣಪ್ಪನವರು ಹೇಗೆ ಸ್ವೀಕರಿಸುತ್ತಾರೋ ಎಂಬ ಅಳುಕಿದ್ದರೂ ವಿನಿತಾಳನ್ನು ಸಂತೈಸಲು ಕಲಾದೃಷ್ಟಿಯ ಕೋನಗಳು, ಆಯಾಮಗಳು, ಕ್ರಿಯೇಟಿವ್ ಚಲನೆಗಳ ಕುರಿತಾಗಿ ಹೇಳುತ್ತ ನಾನೇನು ಮಾಡಬಾರದ ತಪ್ಪು ಮಾಡಿಲ್ಲವೆಂದು ಅರ್ಥೈಸಲು ಪ್ರಯತ್ನಿಸಿ ಸುಮ್ಮನಾಗದೆ ಮಾವ ಶಾಣಪ್ಪನವರಿಗೂ ಈ ಜಗಳದ ಸುದ್ದಿಯನ್ನು ಅಳಿಯ ಹೇಳಿದ. ಮಗಳ ಹುಚ್ಚುಸ್ವಭಾವ ಮತ್ತೆ ಕಾಣಿಸಿಕೊಂಡಿರುವುದು ಚಲೋದಲ್ಲ ಅನಿಸಿ ನಾನು ಬರುವವರೆಗೂ ಆಕೆಯ ಮೇಲೊಂದು ಹದ್ದಿನ ಕಣ್ಣಿಟ್ಟು ಕಾಯಬೇಕೆಂದು ಅಳಿಯನಿಗೆ ತಾಕೀತು ಮಾಡಿದ್ದ ಶಾಣಪ್ಪನವರು ಇದ್ದ ಕೆಲಸವನ್ನು ಇದ್ದಲ್ಲಿಯೇ ಬಿಟ್ಟು ದಿಢೀರನೆ ಧಾರವಾಡಕ್ಕೆ ಹೊರಟಿದ್ದರು.

## ಒಲವೆಂಬ ನೆರಳು...

ತಲೆಮಾರುಗಳ ಹಿಂದಿನ ಇತಿಹಾಸ ಬೆವರು ಸುರಿಸಿದ್ದರಿಂದ ಬೆಣ್ಣಿಹಳ್ಳ ತುಂಬಿ ಹರಿದು ಮಲಪ್ರಭೆ ಸೇರಿತ್ತು. ಅಡತಿ ಅಂಗಡಿಯಲ್ಲಿ ಕಾರಖೂನ ಆಗಿದ್ದ ವಿನಿತಾಳ ಅಜ್ಜನ ನಶೀಬೊಳಗ ರಾಜಕಾರಣ ಬರೆದಿದ್ದಕೊ ಏನೋ ಮುಂದಿನ ತಲೆಮಾರಿನ ಅವರ ಮಗ ಶರಣಪ್ಪನವರು ಶಾಸಕರಾಗಿದ್ದರು. ಶಾಸಕರೆಂದರೇನು ಒಂದೆರಡು ಸಲ ಸಚಿವರೂ ಆಗಿದ್ದರಿಂದಾಗಿ ಚಲೋ ಹೆಸರಿತ್ತು. ನಾಲ್ಕು ಮಕ್ಕಳಲ್ಲಿ ಮೂವರು ವಿದೇಶದಲ್ಲಿದ್ದರೆ ವಿನಿತಾ ಬೆಂಗಳೂರಿನಲ್ಲಿದ್ದಳು. ಕರುಬುವ ಆತ್ಮಗಳಂತೆ, ದುಷ್ಟಶಕ್ತಿಗಳನ್ನು, ದುಡಿವ ಕೈಗಳನ್ನು, ಸ್ವಾಭಿಮಾನದ ಸ್ವಾವಲಂಬಿ ಹುಂಬಹುಡುಗರನ್ನು, ಸಾಕಿಕೊಂಡಿದ್ದ ಈ ಊರಿನ ಮೇಲೆ ಎಲ್ಲಿಲ್ಲದ ಅಕ್ಕರೆ. ಕಾರಿನ ಕಿಡಕಿಗಳಿಂದಾಚೆ ಕಾಣುವ ಧಾವಂತ, ದುಗುಡ, ಆ ಸಂತೋಷಗಳು ನನ್ನವಾಗಬೇಕೆಂಬ ಕಾರಣಕ್ಕಾಗಿ ಅಪ್ಪನ ವರ್ಚಸ್ಸಿನ ಯಾವ ಭೋಗದ ವಸ್ತುಗಳನ್ನು ವಿನಿತಾ ತನ್ನ ಹತ್ತಿರ ಇಟ್ಟುಕೊಂಡಿರಲಿಲ್ಲ. ಆಫಿಸಿಗೆ ಹತ್ತಿರದಲ್ಲೇ ಮನೆ ಇದ್ದುದರಿಂದ ನಡೆದುಕೊಂಡೆ ಹೋಗುತ್ತಿದ್ದಳು. ಆ ಸೌಂಡು, ಹಾರ್ನು, ಟ್ರಾಫಿಕ್, ಸಿಗ್ನಲ್‌ಗಳ ಯಾವ ತೊಡಕುಗಳಿಗೆ ಬೆನ್ನುಹಾಕಿ ಕಿವಿಗೇರಿಸಿಕೊಂಡ ಎಫ್.ಎಮ್ ಲೋಕದಲ್ಲಿ, ಮೊಬೈಲ್‌ಗಳ ಮಾತಿನ ಭರಾಟೆಯಲ್ಲಿ ಹಗಲಹೊತ್ತು ಮುಳುಗಿಹೋಗುತ್ತಿದ್ದಳು. ಸೂರ್ಯ ಮುಣುಗಿ ರಾತ್ರಿಯಾಗುತ್ತಿದ್ದಂತೆ ಬೆಂಗಳೂರಿನ ಯಾವದೋ ಗಲ್ಲಿಯಲ್ಲಿ, ಇನ್ಯಾವದೋ ಬಡಾವಣೆಯ ಪಾರ್ಕಿನಲ್ಲಿ, ಮೋರಿಯ ಕೆಳಗಿನಿಂದ ದೂರದಲ್ಲೆಲ್ಲೋ ಎಂಬಂತೆ ಸಣ್ಣದೊಂದು ಅಳುವ, ಒರಲುವ, ಗೋಗರೆಯುವ ದನಿಯೂ ಕೇಳಿಸುತ್ತದೆ. ಆ ಯಾತನೆಯನ್ನು ಇನ್ನಷ್ಟು ಹತ್ತಿರದಿಂದ ಕೇಳಿಸಿಕೊಳ್ಳಲಿಕ್ಕಾಗಿ ವಿವಸ್ತ್ರಳಾಗಿ ಮಲಗುತ್ತಾಳೆ. ಅದಕ್ಕಾಗಿ ವಿನಿತಾ ಯಾರನ್ನೂ ಅಷ್ಟಾಗಿ ಹಚ್ಚಿಕೊಳ್ಳುತ್ತಿರಲಿಲ್ಲ.

ಬೆನ್ನಮೇಲೆ ಕೈಯಾಡಿಸುವ ಹಿರಿತನದ ಕೆಲವು ಪುಂಡಪೋಕರಿ ಮುದುಕರು ತನ್ನ ಸುತ್ತಲೂ ಇರುವುದು ಗಮನಕ್ಕೆ ಬರುತ್ತಿದ್ದಂತೆ ಆಕೆ ಹೆಚ್ಚು ಜಾಗೃತಳಾಗುತ್ತಿದ್ದಳು. ಆ ಮುದಿ ಸಹೋದ್ಯೋಗಿಯ ಮನೆ ಕೆಲಸದಾಕೆ ತನ್ನ ಮನೆಯ ಕೆಲಸಗಳನ್ನು ನಿಭಾಯಿಸುತ್ತಿದ್ದಳಾದ್ದರಿಂದ ತನ್ನ ಹುಚ್ಚುತನಗಳಲ್ಲಿ ಕೆಲವು ಅವನ ಗಮನಕ್ಕೂ ಬಂದಿದ್ದವು. ಹೆಂಗಸರ ಬಾಯಿಗೆ ಸಿಕ್ಕರೆ